'ಬೋರ್ಹೆಸ್ ಮತ್ತು ನಾನು' ಎಂಬ ಇನ್ನೊಂದು ಕತೆಯಲ್ಲೂ ಇದೇ ಬಗೆಯ ದ್ವಂದ್ವ. ಬೋರ್ಹೆಸ್ ತನಗೊಂದು ಬೇರೆ ಹೆಸರನ್ನು ಆರೋಪಿಸಿಕೊಳ್ಳಲಿಲ್ಲ, ನಿಜ. ಆದರೆ ಅವನೂ, ಅದೋಲ್ಫೊ ಬಿಯೋಯ್ ಕಸಾರೆಸ್ ಎಂಬ ಅವನ ಮಿತ್ರನೂ 'ಎಚ್. ಬುಸ್ತೋಸ್ ದೋಮೇಕ್' ಎಂಬ ಬೇರೊಂದೇ ಹೆಸರನ್ನು ಸೃಷ್ಟಿಸಿಕೊಂಡದ್ದು ತಮ್ಮ ಕಾಲದ ವಿವಿಧ ಸಾಹಿತ್ಯ ಪಂಥಗಳನ್ನು ವಿಡಂಬಿಸುವ ಮೂರು ಪುಸ್ತಕಗಳನ್ನು ಬರೆಯುವುದಕ್ಕಾಗಿ.

ನಮ್ಮ ನವೋದಯ ಕಾಲದಲ್ಲಿ ಅನೇಕ ಲೇಖಕರು ತಮ್ಮ ಕಾವ್ಯನಾಮದಿಂದಲೇ ಹೆಸರಾಗಿದ್ದರಷ್ಟೆ. ಉದಾಹರಣೆಗೆ ಮುದ್ದಣ (ನಂದಳಿಕೆ ನಾರಣಪ್ಪ), ಸಂಸ (ವೆಂಕಟಾದ್ರಿ ಶರ್ಮ), ಶ್ರೀನಿವಾಸ (ಮಾಸ್ತಿ ವೆಂಕಟೇಶ ಅಯ್ಯಂಗಾರ್), ರಾಘವ (ಎಂ.ವಿ. ಸೀತಾರಾಮಯ್ಯ), ಆನಂದಕಂದ (ಬೆಟಗೇರಿ ಕೃಷ್ಣಶರ್ಮ), ವಿನಾಯಕ (ವಿ.ಕೃ. ಗೋಕಾಕ), ಆನಂದ (ಅಜ್ಜಂಪುರ ಸೀತಾರಾಂ), ತ್ರಿವೇಣಿ (ಅನಸೂಯ), ಕೇಫ (ಡಾ. ಎ.ವಿ. ಕೇಶವಮೂರ್ತಿ), ಚದುರಂಗ (ಎಂ. ಸುಬ್ರಹ್ಮಣ್ಯರಾಜೇ ಅರಸ್), ಕಾವ್ಯಾನಂದ (ಸಿದ್ಧಯ್ಯ ಪುರಾಣಿಕ), ನಿರಂಜನ (ಕುಳಕುಂದ ಶಿವರಾಯ) ಮೊದಲಾದವರು. ಇನ್ನು ಕೆಲವರು ತಮ್ಮ ಪೂರ್ಣ ಹೆಸರುಗಳ (ಅಂದರೆ ತಮ್ಮ ಊರಿನ, ತಂದೆಯ ಹಾಗೂ ತಮ್ಮ ಹೆಸರುಗಳ) ಮೊದಲ ಕನ್ನಡ ಅಕ್ಷರಗಳಿಂದ ಪ್ರಸಿದ್ಧರಾದರು: ಕುವೆಂಪು, ಪು.ತಿ.ನ., ತೀ.ನಂ.ಶ್ರೀ., ಅ.ನ.ಕೃ., ತ.ರಾ.ಸು., ಅ.ರಾ.ಸೇ.; ಮತ್ತೆ ಕೆಲವರು ತಮ್ಮ ಹೆಸರಿನ ಹಿಂದಿದ್ದ ಎರಡು ಇಂಗ್ಲಿಷ್ ಇನಿಷಿಯಲ್‌ಗಳನ್ನು ಹಾಗೆಯೇ ಇರಿಸಿಕೊಂಡರು: ಬಿ.ಎಂ.ಶ್ರೀ. (ಬಿ.ಎಂ. ಶ್ರೀಕಂಠಯ್ಯ), ಕೆ.ಎಸ್.ನ. (ಕೆ.ಎಸ್. ನರಸಿಂಹಸ್ವಾಮಿ), ಎಚ್ಚೆಸ್ವಿ (ಎಚ್.ಎಸ್. ವೆಂಕಟೇಶಮೂರ್ತಿ), ವಿ.ಸೀ. (ವಿ. ಸೀತಾರಾಮಯ್ಯ); ಯು.ಆರ್. ಅನಂತಮೂರ್ತಿಯವರು ಯಾವುದೋ ಸಂದರ್ಭದಲ್ಲಿ 'ವೀ.ಸೀ.' ಎಂದು ಬರೆದದ್ದರಿಂದ ಸ್ವತಃ ವಿ.ಸೀ.ಯವರಿಗೇ ಅಸಮಾಧಾನವಾಗಿತ್ತು. ಇನ್ನು ಡಿ.ವಿ.ಜಿ. (ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ) ಅವರಾದರೋ ತಮ್ಮ ಮೂರು ಹೆಸರುಗಳ ಮೊದಲ ಇಂಗ್ಲಿಷ್ ಅಕ್ಷರಗಳಿಂದಲೇ ಹೆಸರಾದವರು. ಮತ್ತೆ ಕೆಲವರು ತಾವು ಸೃಷ್ಟಿಸಿದ ಪಾತ್ರದಿಂದಲೋ ಅಥವಾ ಪಂಡಿತ ಕಲೆಯೊಂದರಲ್ಲಿ ತಮಗಿರುವ ಪರಿಣತಿಯಿಂದಲೋ ಅದೆಷ್ಟು ಪ್ರಸಿದ್ಧರಾದರೆಂದರೆ ತಮ್ಮ ಮೂಲ ಹೆಸರನ್ನೇ ಮರೆಮಾಚುವಷ್ಟು. 'ಕೆ' ಅಂದರ ಕಾಷ್ಠ ಎಂದು ಸಾಹಿತ್ಯಪ್ರಿಯರೆಲ್ಲರಿಗೂ ಗೊತ್ತು. ಅದೇ ರೀತಿ 'ಶತಾವಧಾನಿ' ಅಂದರೆ ಸಾಕು, ರಾ ಗಣೇಶ್ ನೆನಪಾಗುತ್ತಾರೆ.



ವಿ. ಸೀತಾರಾಮಯ್ಯ

ಕಾವ್ಯನಾಮದಲ್ಲಿ ಬರೆದವರು ಇನ್ನೂ ಎಷ್ಟೋ ಮಂದಿ. ಅದಕ್ಕೆ ಹಲವು ಕಾರಣಗಳಿದ್ದಾವು. ನನಗೆ ತಿಳಿದಂತೆ ಒಂದು ಕಾರಣ: ಹಿಂದೆ ಸರಕಾರಿ ಕೆಲಸದಲ್ಲಿರುವವರು ಬರೆಯಬಾರದೆಂದೋ, ಬರೆದರೂ ಸರಕಾರದ ಅನುಮತಿ ಪಡೆದುಕೊಂಡು ಪ್ರಕಟಿಸಬೇಕೆಂದೋ ನಿಯಮವಿತ್ತಂತೆ. ಹಾಗಾಗಿ ಬರೆಯಲೇಬೇಕೆಂದು ನಿರ್ಧರಿಸಿದ ಕೆಲವರು ಕಾವ್ಯನಾಮವನ್ನೇ ನೆಚ್ಚಿಕೊಳ್ಳಬೇಕಾಯಿತಂತೆ.